149 ನೇ 13.12.2023

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 72 ರಡಿ ಸೂಚಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 91ಕ್ಕೆ ಸರ್ಕಾರದ ಹೇಳಿಕೆ.**

## -: ಸೂಚನೆ :-

ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಕೋಣಸಾಲೆ ಗ್ರಾಮದ ಸ.ನಂ.31 ರಲ್ಲಿ 00-25 ಗುಂಟೆ ಜಮೀನು ಶ್ರೀ ಶಿವಣ್ಣ ಬಿನ್ ಸಿಂಗ್ರಿ ಮುದ್ದೇಗೌಡ ಮತ್ತು ಶ್ರೀ ಗೂಳಿಗೌಡ ಬಿನ್ ಸಿಂಗ್ರಿ ಮುದ್ದೇಗೌಡರಿಗೆ ಕ್ರಮವಾಗಿ ತಹಶೀಲ್ದಾರ್ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಲ್.ಎನ್.ಡಿ. ಆರ್.ಯು.ಆರ್. 4152/91-92 ಮತ್ತು ಎಲ್ಎನ್‌ಡಿ. ಆರ್.ಯು.ಆರ್. 455/91-92, ದಿನಾಂಕ:08.06.1999 ಒಟ್ಟು 50 ಗುಂಟೆಗಳಿಗೆ ಸಾಗುವಳಿ ಪತ್ರಗಳನ್ನು ನೀಡಲಾಗಿರುತ್ತದೆ. ಎಂ.ಆರ್. ನಂಬರ್ 39/1999-2000 ರಂತೆ ಆರ್.ಟಿ.ಸಿ. ಸಹ ಇಂಡೀಕರಣವಾಗಿರುತ್ತದೆ. ಸದರಿ ರೈತರು ಜಮೀನಿಗೆ ಸಂಬಂಧಪಟ್ಟ ಸಮಗ್ರ ದಾಖಲಾತಿಗಳನ್ನು ಹೊಂದಿರುತ್ತಾರೆ. ಇದೇ ಜಮೀನಿನ ಬಾಜುದಾರರಾದ ಶ್ರೀ ಸಿದ್ದೇಗೌಡ ಬಿನ್ ಸಿದ್ದಯ್ಯ ಎಂಬುವವರು ಸ.ನಂ.31 ರಲ್ಲಿನ ಶ್ರೀಮತಿ ಅನುರಾಧ ಕೋಂ ಶ್ರೀನಿವಾಸ ರವರಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿದ್ದು ಶ್ರೀಮತಿ ಅನುರಾಧ ಕೋಂ ಶ್ರೀನಿವಾಸರವರು ಮೂಲ ಟಿಪ್ಪಣಿ ಅಥವಾ ಆಕಾರಬಂದ್ ದಾಖಲೆಗಳು ಅಥವಾ ಸ್ವಾಧೀನಾನುಭವ ಇದ್ದ್ಯಾವುದನ್ನೂ ನೋಡದೇ ಹೊಸ ಸ.ನಂ.349 ಎಂದು ದುರಸ್ತಿ ಮಾಡಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಮದ್ದೂರು ರವರು ಪತ್ರ ಸಂಖ್ಯೆ: ಸಿ.ಆರ್ 357753/2022-23, ದಿನಾಂಕ: 13.1.2023 ರಂತೆ ಮೂಲ ಟಿಪ್ಪಣಿ ಇರುವುದಿಲ್ಲವೆಂದು ಹಾಗೂ ಪತ್ರ ಸಂಖ್ಯೆ: ಸಿ.ಆರ್. 367804/2022-23, ದಿನಾಂಕ: 13.01.2023 ರಂದು ಆಕಾರಬಂದ್ ಇರುವುದಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಶ್ರೀಮತಿ ಅನುರಾಧ ಕೋಂ ಶ್ರೀನಿವಾಸ ರವರಿಗೆ ಸ.ನಂ.349 ಕ್ಕೆ ಅಕ್ರಮವಾಗಿ ಆಕಾರಬಂದ್, ಟಿಪ್ಪಣಿ ಇಂಡೀಕರಿಸಲು ಬಾಜುದಾರರಿಗೂ ನೋಟೀಸ್ ನೀಡದೇ ಕಾನೂನು ರೀತ್ಯಾ ಅಳತೆ ಮಾಡದೇ ಇರುವ ಬಗ್ಗೆ ಮತ್ತು ಅಕ್ಕಪಕ್ಕದ ಜಮೀನಿನ ಮಾಲೀಕರುಗಳಿಗೆ ತೊಂದರೆ ನೀಡುತ್ತಿರುವ ಅಧಿಕಾರಿಗಳ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

## -: ಹೇಳಿಕೆ :-

ಮದ್ದೂರು ತಾಲ್ಲೂಕು ಕೊಪ್ಪ ಹೋಬಳಿ, ಕೋಣಸಾಲೆ ಗ್ರಾಮದ ಸ.ನಂ 31 ಸರ್ಕಾರಿ ಗೋಮಾಳವಾಗಿದ್ದು ಶ್ರೀ ಶಿವಣ್ಣ ಇವರಿಗೆ 0-25 ಗುಂಟೆ ಮಂಜೂರಾಗಿದ್ದು ಇವರಿಗೆ ನೋಟೀಸು ನೀಡದೆ, ಶ್ರೀಮತಿ ಅನುರಾಧಾ ಕೋಂ ಶ್ರೀನಿವಾಸ ಇವರಿಗೆ ಕ್ರಯವಾದ ಜಮೀನಿಗೆ ಹೊಸ ಸ.ನಂ. 349 ನೀಡಿ ತಾಲ್ಲೂಕು ಭೂಮಾಪಕರು ಅಳತೆ ಮಾಡಿರುತ್ತಾರೆ ಎಂದು ದಿ.10-01-2023 ರಂದು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರಿಗೆ ದೂರು ಸ್ವೀಕೃತವಾಗಿರುತ್ತದೆ. ಆಯುಕ್ತರ ಪತ್ರ ಸಂಖ್ಯೆ: SSSLR-11025/75/2023 ದಿನಾಂಕ:15-02-2023ರಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಮದ್ದೂರು ಇವರಿಗೆ ವಿಚಾರಣೆಗೆ ಹಾಜರಾಗಲು ತಿಳಿಸಲಾಗಿತ್ತು. ಅದರಂತೆ ದಾಖಲೆಗಳನ್ನು ಪರಿಶೀಲಿಸಲಾಗಿ ಸೆಟ್ಲ್‌ಮೆಂಟ್ ಆಕಾರಬಂದ್/ಗ್ರಾಮ ನಕಾಶೆಯಂತೆ ಕೋಣಸಾಲೆ ಗ್ರಾಮದ ಕೊನೆಯ ರೀ ಸ.ನಂ.306 ಆಗಿದ್ದು ನಂತರದಲ್ಲಿ ರೀಸನಂ 349 ದುರಸ್ತಿಯಾಗಿರುವ ಬಗ್ಗೆ, ಸಂಬಂಧಿಸಿದ ಟಿಪ್ಪಣಿ, ಆಕಾರ್‌ಬಂದ್ ಹಾಗೂ ಇತರೆ ಯಾವುದೇ ದಾಖಲೆಗಳು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಮದ್ದೂರು ಇವರಲ್ಲಿ ಲಭ್ಯವಿರುವುದಿಲ್ಲ. ಈ ಸಂಬಂಧ ನಕಲು ಕೋರಿ ಅರ್ಜಿ ಸಲ್ಲಿಸಿದವರಿಗೆ ಹಿಂಬರಹ ನೀಡಲಾಗಿರುತ್ತದೆ.

ಆರ್.ಟಿ.ಸಿ ಮತ್ತು ಕಂದಾಯ ದಾಖಲೆಗಳನ್ನು ಪರಿಶೀಲಿಸಲಾಗಿ 1995-96ನೇ ಸಾಲಿನಿಂದ ರೀ. ಸ.ನಂ.349 ಎಂದು 2ಎ-00ಗು ವಿಸ್ತೀರ್ಣಕ್ಕೆ ಶ್ರೀ ಪಿ.ಸಿದ್ದೇಗೌಡ ಎಂಬುವರ ಹೆಸರಿನಲ್ಲಿ ಆರ್.ಟಿ.ಸಿ ದಾಖಲಾಗಿರುತ್ತದೆ. ನಂತರ ಎಂ.ಆರ್: 79/2002-03 ರಂತೆ ಶ್ರೀ ಕೆ.ಎಸ್ ಶಿವಶಂಕರಯ್ಯ ಬಿನ್ ಪಿ. ಸಿದ್ದೇಗೌಡ ಹಾಗೂ ಶ್ರೀ ಕೆ.ಎಸ್. ಕೃಷ್ಣ ಬಿನ್ ಪಿ.ಸಿದ್ದೇಗೌಡ ಇವರ ಹೆಸರಿಗೆ ಖಾತೆಯಾಗಿರುತ್ತದೆ. ನಂತರ ಎಂ.ಆರ್.2007-08 ರಂತೆ ಕ್ರಯವಾಗಿ ಅನುರಾಧ ಕೋಂ ಶ್ರೀನಿವಾಸು ಇವರ ಹೆಸರಿನಲ್ಲಿ ಹಕ್ಕು ದಾಖಲಾಗಿರುತ್ತದೆ. 1968-69 ರಿಂದ 1994-95 ರವರೆಗೆ ಈ ನಂಬರಿಗೆ ಆರ್.ಟಿ.ಸಿ ಇರುವುದು ಕಂಡುಬಂದಿರುವುದಿಲ್ಲ.

ರೀ.ಸ.ನಂ.349 ಎಂದು ದುರಸ್ತಿಯಾಗಿರುವುದಿಲ್ಲ ಮತ್ತು ಈ ಕುರಿತು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಾರ್ಯಾಲಯದಲ್ಲಿ ಯಾವುದೇ ನಕ್ಷೆ ಹಾಗೂ ದಾಖಲೆಗಳು ಚಾಲ್ತಿಯಲ್ಲಿರುವುದಿಲ್ಲ.

**ಸಂಖ್ಯೆ: ಕಂಇ 131 ಎಸ್ಎಸ್‌ಸಿ 2026**

(ಡಾ. ಜಿ ಪರಮೇಶ್ವರ)
ಉಪ ಮುಖ್ಯಮಂತ್ರಿಗಳು,
ಕಂದಾಯ ಹಾಗೂ ಕ್ರೀಡಾ ಸಚಿವರು